ಅಸಲು ದಾವೆ ನಂಃ 66/2018 ಪಿ.ಡಬ್ಲ್ಯೂಃ1– ಹನಮಂತಪ್ಪ ತಳವಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 27–09–2022 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ– 4 ರಿಂದ 9 ನೇ ಪ್ರತಿವಾದಿಗಳ ಪರ ಶ್ರೀ. ವಿ.ಡಿ.ಪಿ. ವಕೀಲರಿಂದಃ**

1. ವಾದ ಪತ್ರದಲ್ಲಿ ಮೂಲ ಪುರುಷ ಎಂದು ಕಾಣಿಸಿರುವ ಹನಮಪ್ಪ ತಳವಾರ ನನ್ನ ತಂದೆಯ ತಂದೆ. ಆತನಿಗೆ ಹನಮವ್ವ , ಲಕ್ಷ್ಮವ್ವ ಮತ್ತು ಯಲ್ಲಪ್ಪ ಎಂಬ ಮಕ್ಕಳು ಇದ್ದರು. ಹನಮಪ್ಪನಿಗೆ ಮರಿಯಪ್ಪ ಮತ್ತು ಯಲ್ಲಪ್ಪ ಇಬ್ಬರೇ ಗಂಡು ಮಕ್ಕಳು , ಹೆಣ್ಣು ಮಕ್ಕಳು ಇಲ್ಲ ಎಂದರೆ ಸರಿ ಅಲ್ಲ. ನಾನು ಈ ದಾವೆಯನ್ನು ಸರ್ವೇ ನಂ. 159/1 ಕ್ಷೇತ್ರ 2 ಎಕರೆ 6 ಗುಂಟೆ ಮತ್ತು ಸರ್ವೇ ನಂ.153/3 ಕ್ಷೇತ್ರ 5 ಎಕರೆ 26 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಹಾಕಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ಸರ್ವೇ ನಂ.159/1 ಮಲ್ಲಯ್ಯ ತಂದೆ ವೀರುಪಾಕ್ಷಪ್ಪ ಸುಂಕದ ಇವರ ಹೆಸರಿನಲ್ಲಿದೆ ಎಂದರೆ ಸರಿ ಅಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಅಲ್ಲ ಎಂದರೆ ಸರಿ ಅಲ್ಲ. 10 ರಿಂದ 12 ನೇ ಪ್ರತಿವಾದಿಗಳು ಈ ದಾವೆಗೆ ಅವಶ್ಯಕ ಪಕ್ಷಗಾರರು ಅಲ್ಲ ಎಂದರೆ ಸರಿ ಅಲ್ಲ. ಅವರು ಹನಮವ್ವ ನಮ್ಮ ಕುಟುಂಬಕ್ಕೆ ಸೇರಿದವಳು ಅಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿಗಳು ತಪ್ಪು ಮಾಹಿತಿ ಕೊಟ್ಟು, ದಾವಾ ಆಸ್ತಿಗಳಿಗೆ ತಮ್ಮ ಹೆಸರನ್ನು ಸೇರಿಸಿಕೊಂಡಿರುತ್ತಾರೆ. ಉಳಿದ ಸರ್ವೇ ನಂಬರಗಳ ಬಗ್ಗೆ ಮಾಹಿತಿ ನನಗೆ ಇಲ್ಲ. ನನ್ನ ತಂದೆಯ ಹೆಸರು ಯಲ್ಲಪ್ಪ. ನನ್ನ ತಾಯಿಯ ಹೆಸರು ಫಕೀರವ್ವ. ನನ್ನ ಅಡ್ಡಹೆಸರು ತಳವಾರ.

2. ಯಲ್ಲಪ್ಪ ನಾನು 6 ತಿಂಗಳು ಕೂಸು ಇದ್ದಾಗ ನನ್ನನ್ನು ದತ್ತಕ ತೆಗೆದುಕೊಂಡಿರುತ್ತಾರೆ. 2015 -16 ರಲ್ಲಿ ನಾನು ದತ್ತಕ ಹೋಗಿದ್ದ ಬಗ್ಗೆ ಗೊತ್ತಾಯಿತು. ನನ್ನ ತಾಯಿ ಗಂಗವ್ವ ಆ ಬಗ್ಗೆ ಹೇಳಿದರು. ನನಗೆ ದತ್ತಕ ಪತ್ರ ಆಗಿದ್ದ ಬಗ್ಗೆ ಕಾಗದ ಪತ್ರಗಳು ಗೊತ್ತಿಲ್ಲ. ನಾನು 10 ನೇ ತರಗತಿಯವರೆಗೆ ಶಾಲೆ ಕಲಿತಿದ್ದೇನೆ. ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಯಲ್ಲಪ್ಪ ಬೆನಹಾಳ ಎಂದು ಇದೆ. ನನ್ನ ಜನಕ ತಂದೆಯ ಹೆಸರು ಸಹ ಯಲ್ಲಪ್ಪ. ನನ್ನ ಬ್ಯಾಂಕ ದಾಖಲಾತಿಗಳಲ್ಲಿ ಮತ್ತು ಆಧಾರ ಕಾರ್ಡನಲ್ಲಿ ನನ್ನ ತಂದೆಯ ಹೆಸರು ಯಲ್ಲಪ್ಪ ಬೆನಹಾಳ ಎಂದು ಇದೆ. ಆ ಬಗ್ಗೆ ನಾನು ದಾಖಲಾತಿಗಳನ್ನು ನ್ಯಾಯಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ಇಂಥವರಿಗೆ ದತ್ತಕ ಹೋಗಿದ್ದೇನೆಂದು ಹೇಳಿ ನಾನು ನ್ಯಾಯಾಲಯದಲ್ಲಿ ಘೋಷಣಾತ್ಮಕ ದಾವೆ ಹಾಕಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ದತ್ತಕ ಹೋದರೆ ದತ್ತಕ ಹೋದ ಮನೆತನದ ಹೆಸರಿನಲ್ಲಿ ಸಹಿ ಮಾಡುತ್ತಾನೆ ಎಂದರೆ ನಿಜ. ನನ್ನ ವಾದ ಪತ್ರದಲ್ಲಿ , ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಅಡ್ಡ ಹೆಸರನ್ನು ಬೆನಹಾಳ ಊರ್ಫ ತಳವಾರ ಎಂದು ಕಾಣಿಸಿರುತ್ತೇನೆ. ವಾದ ಪತ್ರ ಮತ್ತು ವಕಾಲತ್ತ ನೋಡುತ್ತಿದ್ದೇನೆ. ಅದರಲ್ಲಿರುವ ಸಹಿ ನನ್ನದು. ನಾನು ಈ ದಾವೆ ಹಾಕುವಾಗ ನನ್ನ ಅಡ್ಡ ಹೆಸರನ್ನು ಬೆನಹಾಳ ಊರ್ಫ ತಳವಾರ ಎಂದು ಕಾಣಿಸಿಲ್ಲ ಎಂದರೆ ನಿಜ.

3. ರೋಣದ ಹಿರಿಯ ಸಿವಿಲ್ ನ್ಯಾಯಾಲಯದ ಮುಂದೆ ಶಿವಯೋಗಿ ಊರ್ಫ ಶಿವಾನಂದ ತಂದೆ ಹನಮಪ್ಪ ತಳವಾರ ಊರ್ಫ ಗಾಜಿ , ಮಲ್ಲವ್ವ ಕೋಂ. ಹನಮಪ್ಪ ಗಾಜಿ ಊರ್ಫ ತಳವಾರ , ಫಕೀರವ್ವ ಕೋಂ. ರಂಗಪ್ಪ ಗಾಜಿ ಊರ್ಫ ತಳವಾರ , ಭೀಮವ್ವ ಕೋಂ. ಫಕೀರಪ್ಪ ಗಾಜಿ ಊರ್ಫ ತಳವಾರ ಇವರೆಲ್ಲರೂ ಸೇರಿ ಪರಶುರಾಮ ತಂದೆ ರಂಗಪ್ಪ ಗಾಜಿ ಊರ್ಫ ತಳವಾರ, ಬಸಪ್ಪ ಮರಿಯಪ್ಪ ಗಾಜಿ ಊರ್ಫ ತಳವಾರ , ಶರಣಪ್ಪ ಬಸಪ್ಪ ಗಾಜಿ ಊರ್ಫ ತಳವಾರ ಇವರ ವಿರುದ್ಧ ಒಂದು ಪಾಲುವಾಟ್ನಿಗಾಗಿ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಇವರೆಲ್ಲರೂ ಹನಮಪ್ಪ ತಳವಾರ ಈತನ ಮಗ ಮರಿಯಪ್ಪ ಇವರ ವಾರುಸದಾರರು ಎಂದರೆ ಸಾಕ್ಷಿ ನಮಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಆ ದಾವೆಯಲ್ಲಿ ಸರ್ವೇ ನಂ.160/3, ಸರ್ವೇ ನಂ.158/7, ಸರ್ವೇ ನಂ.160/2, ಸರ್ವೇ ನಂ. 159/1 , ಸರ್ವೇ ನಂ.159/2, ವಿ.ಪಿ.ಸಿ. ನಂ.763 ಹಿತ್ತಲು ಜಾಗೆ ಹಾಗೂ ವಿ.ಪಿ.ಸಿ. 363 ಮತ್ತು 156 ಮನೆಗಳಿಗೆ ಸೇರಿ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಗಳೂ ಆ ದಾವಾ ಆಸ್ತಿಗಳಲ್ಲಿ ಸೇರಿದ್ದವು ಎಂದರೆ ಸರಿ ಅಲ್ಲ. ಹನಮಪ್ಪನ ಮಗ ಯಲ್ಲಪ್ಪನಿಗೆ ಮಕ್ಕಳು ಇಲ್ಲದ ಕಾರಣ, ಮೇಲಿನಂತೆ ಮರಿಯಪ್ಪನ ಮಕ್ಕಳು ದಾವೆ ಹಾಕಿ ರಾಜಿ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆ ರಾಜೀ ಪ್ರಕಾರ ದಾವಾ ಅಸ್ತಿಗಳ ಕಬ್ಜಾ ಪ್ರತಿವಾದಿಯ ಹತ್ತಿರ ಇರುತ್ತದೆ ಎಂದರೆ ಸರಿ ಅಲ್ಲ. ಪ್ರತಿವಾದಿಗಳು ಕೈಪಿಯತ್ತು ಹಾಕಿದ ನಂತರ ಸದರಿ ರಾಜೀ ನಮಗೆ ಬಂಧನಕಾರಿ ಅಲ್ಲ

ಎಂದು ಬೇರೆ ಯಾವುದಾದರೂ ದಾವೆ ಹಾಕಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಈ ದಾವೆ ಹಾಕಿದ್ದೇನೆ ಎಂದು ಹೇಳುತ್ತಾರೆ. ಸದರಿ ರಾಜೀಯ ಪ್ರಕಾರ ಸರ್ವೇ ನಂ.159/1 ಬಸಪ್ಪ ಮರಿಯಪ್ಪ ತಳವಾರ ಇತನ ಕಬ್ಜಾ ಮತ್ತು ವಹಿವಾಟಿನಲ್ಲಿದೆ ಎಂದರೆ ಸರಿ ಅಲ್ಲ. 5 ನೇ ಪ್ರತಿವಾದಿ ಕಬ್ಜಾದಲ್ಲಿ ಇರುವುದು ನನಗೇ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಸರ್ವೇ ನಂ.160/3, ಸರ್ವೇ ನಂ.158/7, ಸರ್ವೇ ನಂ.160/2 ಈ ಆಸ್ತಿಗಳಿಗೆ ಸಂಬಂಧಪಟ್ಟಂತೆ 1 ರಿಂದ 4 ನೇ ಪ್ರತಿವಾದಿ ತಪ್ಪು ಮಾಹಿತಿ ಕೊಟ್ಟು, ರಾಜೀ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದು, ಈ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾನು ಈ ದಾವೆಯಲ್ಲಿ ಪರಿಹಾರ ಕೇಳಿಲ್ಲ.

**4.** ಲಕ್ಷಪ್ಪ ತಂದೆ ಸಿದ್ದಪ್ಪ ಭೂಸಣ್ಣವರ , ಹುಚ್ಚಪ್ಪ ತಂದೆ ಭೀಮಪ್ಪ ಕೊಣ್ಣೂರ , ಬಸಪ್ಪ ರಂಗಪ್ಪ ತಳವಾರ , ಹನಮಂತಪ್ಪ ತಂದೆ ಮರಿಸಿದ್ದಪ್ಪ ತಳವಾರ ನಮ್ಮ ಸಂಬಂಧಿಕರು ಎಂದರೆ ಸರಿ ಅಲ್ಲ. ಅವರು ನಮಗೆ ಬೇಕಾದವರು ಎಂದರೆ ಸಾಕ್ಷಿ ಅವರು ನಮ್ಮ ಹೊಲದ ಪಕ್ಕದಮರ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**